ದಿನಾಂಕಃ 22-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಹೆಚ್. ಜೆ. ವಿ. ವಕೀಲರಿಂದ

4. ಆರೋಪಿ ಸರಿಯಾಗಿ ಮೂರು ತಿಂಗಳಿಗೆ ನಿಪಿ.1 ನ್ನು ಕೊಟ್ಟಿರುತ್ತಾರೆ. ಆರೋಪಿ ಚೆಕ್ಕು ಕೊಟ್ಟಿಲ್ಲ, ದಿನಾಂಕ ಸಹ ಬರೆದಿಲ್ಲ ನಾನೇ ಅವುಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ ಬೌನ್ಸ್ ಆದ ಮಾರನೇಯ ದಿನಕ್ಕೆ ಆರೋಪಿಯನ್ನು ಕೇಳಿರುತ್ತೇನೆ. ಬಿ. ಜಿ. ನಗರ ಕಾಂಪ್ಲೆಕ್ಸ್ ಹತ್ತಿರ ಕೇಳಿರುತ್ತೇನೆ. ಆ ಸಮಯದಲ್ಲಿ ಬೇರೆ ಯಾರು ಇರಲಿಲ್ಲ. ಅಲ್ಲಿ ಸಾರ್ವಜನಿಕರು ಇರುತ್ತಾರೆ ಎಂದರೆ ಸರಿ. ಚೆಕ್ ಬೌನ್ಸ್ ಆದ ನಂತರ ನಾನು ಆರೋಪಿಯನ್ನು ಭೇಟಿ ಆಗಿಲ್ಲ, ಹಣ ಕೇಳಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಆರೋಪಿ ಬರವಣಿಗೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅವರೇ ಬರೆದುಕೊಂಡು ತಂದು ಕೊಟ್ಟರು.

5. ಗೋವಿಂದಘಟ್ಟ ಗ್ರಾಮದ ಕುಮಾರ ಬಿನ್ ರಾಮೇಗೌಡ ಗೊತ್ತಿಲ್ಲ. ಗಿರಿಗೌಡರ ಮಗ ವೆಂಕಟರಾಮು ಗೊತ್ತಿಲ್ಲ. ಕುಮಾರ, ವೆಂಕಟರಾಮು ಹಾಗೂ ಶಶಿಧರ ರವರು ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ. ಶಶಿಧರ ರವರು ಕೇಸು ಹಾಕಿದ ವಿಚಾರ ನನಗೆ ಗೊತ್ತು. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣಗಳು ಕೋರ್ಟ್ ಗೆ ಹಾಜರು ಆಗದೆ ವಜಾ ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯಿಂದ ಸಾಧ್ಯವಾದಷ್ಟು ಅಕ್ರಮವಾಗಿ ಹಣವನ್ನು ವಸೂಲಿ ಮಾಡೋಣ ಎಂದು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಷ್ಟು ಹಣ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ